ಎಷ್ಟೋ ಜನರ ಮೇಲೆ ರೈಲು ಹರಿಸಿಯೂ ವೃತ್ತಿಬದ್ಧರಾಗಿ ವರ್ಷಗಟ್ಟಲೆ ದುಡಿಯುವವರ ಮನಃಸ್ಥಿತಿ ಹೇಗಿರಬೇಡ. ಇದು ದೇಶಾತೀತವಾದ ಸಂಗತಿ. ಸರ್ಬಿಯಾದ ನಿರ್ದೇಶಕ ಮಿಲೋಸ್ ರ್‍ಯಾಡೋವಿಕ್ ಅವರನ್ನೂ ಈ ಸಂಗತಿ ಕಾಡಿದೆ. ಅದನ್ನೇ ವಸ್ತುವಿಷಯವಾಗಿಸಿ ಅವರು ತೆರೆಕಾಣಿಸಿದ ಸಿನಿಮಾ 'ಟ್ರೇನ್ ಡ್ರೈವರ್ಸ್ ಡೈರಿ'.

ಇಲಿಜ ನಿವೃತ್ತಿಯ ಅಂಚಿನಲ್ಲಿರುವ ರೈಲು ಚಾಲಕ. ರೈಲು ಯಾರ ಮೇಲಾದರೂ ಹರಿದಾಗಲೋ, ಯಾವುದಾದರೂ ಕಾರಿಗೆ ಡಿಕ್ಕಿ ಹೊಡೆದಾಗಲೋ ಕಂಗಾಲಾಗುವಷ್ಟು ಸಂವೇದನೆ ದಶಕಗಳ ಅನುಭವದ ನಂತರವೂ ಆತನಲ್ಲಿ ಉಳಿದಿದೆ. ಇಳಿಗಾಲದಲ್ಲೂ ಆತನಿಗೆ ಒಬ್ಬ ಆತ್ಮಸಂಗಾತಿ ಇದ್ದಾರೆ. ಆ ಸಂಗಾತಿ ಕೂಡ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡಿದವರೇ. ಆ ಮಹಿಳೆಯ ಮನೆಯ ವಿನ್ಯಾಸ ಕೂಡ ರೈಲುಬೋಗಿಯಂತೆ. ಅಲ್ಲಿಗೆ ಹೋಗಿ, ಮದ್ಯದ ಲೋಟಗಳನ್ನು ತಾಕಿಸಿ, ಲಘು ಸಂಗೀತಕ್ಕೆ ದೇಹ ಆಡಿಸಿ ಅಂಗಾತವಾಗುವುದಷ್ಟೇ ಇಲಿಜಗೆ ಹಗುರಾಗುವ ಮಾರ್ಗ. ಹಾಗೆ ಅವರು ಹಗುರಾಗಿ, ಒಂದು ದೊಡ್ಡ ಉಸಿರನ್ನು ಹೊರಹಾಕಿದಾಗ ಆತ್ಮಸಂಗಾತಿ ಹೇಳುತ್ತಾರೆ: 'ನೀನು ಗೊಳೋ ಎಂದು ಅತ್ತುಬಿಡು, ಆಗಲಾದರೂ ನಗುವೆಯೋ ಏನೋ? ಮೂವತ್ತು ವರ್ಷವಾಯಿತು ನಿನ್ನ ಮುಖದಲ್ಲಿ ಮಂದಹಾಸ ನೋಡಿ'.

ಇಂತಿಪ್ಪ ಇಲಿಜ ರೈಲು ಚಾಲನೆ ಮಾಡುವಾಗ ದೂರದ ಸೇತುವೆಯ ಹಳಿಯ ಮೇಲೆ ಹತ್ತು ವರ್ಷದ ಹುಡುಗನೊಬ್ಬ ನಡೆದು ಬರುತ್ತಿರುತ್ತಾನೆ. ಚಕ್ಕನೆ ಬ್ರೇಕ್ ಹಾಕಿದರೂ ರೈಲು ನಿಲ್ಲುವುದು ಹುಡುಗನ ದೇಹದಿಂದ ಕೆಲವೇ ಸೆಂಟಿಮೀಟರ್ ದೂರದಲ್ಲಿ. ನೋಡುವ ನಮಗೆ 'ಅಬ್ಬಾ ಬದುಕಿತಲ್ಲ ಬಡಜೀವ' ಎನಿಸುವಂಥ ದೃಶ್ಯ ಸಂಯೋಜನೆ ಅದು. ತಾನು ಉಳಿಸಿದ

'ಟ್ರೇನ್ ಡ್ರೈವರ್ಸ್ ಡೈರಿ': ರೈಲು ಚಾಲಕರ ಕಥನ

